ಇರುವ ಹೆಚ್ಚುವರಿ ನೀರು ಸದರಿ ಕೆರೆಯ ತೂಬಿನ ಮುಖಾಂತರ ಹರಿದು ಕೃಷ್ಣಾ ನದಿ ಸೇರುತ್ತದೆ. ಸಹಾಪುರ ಶಾಖಾ ಕಾಲುವೆಯ ವಿತರಣಾ ಕಾಲುವೆ ಸಂಖ್ಯೆ 6ರಡಿಯಲ್ಲಿ 18000ಹೆ. ನೀರಾವರಿ ಅಚ್ಚುಕಟ್ಟು ಪ್ರದೇಶವಿದ್ದು, ಸದರಿ ಕಾಲುವೆಯು 36ಕಿ.ಮೀ.ಉದ್ದವಿದ್ದು, ಇದರಡಿಯಲ್ಲಿ 32 ಪಾರ್ಶ್ವ ಕಾಲುವೆಗಳು ಇರುತ್ತದೆ. ಈ ವಿತರಣಾ ಕಾಲುವೆಯು ಬೋನಾಳ್ ಕೆರೆಯ ಕೆಳಭಾಷದಲ್ಲಿರುತ್ತದೆ. ಸದರಿ ವಿತರಣಾ ಕಾಳುವೆಯಡಿ ಮೇಲ್ಭಾಗದ ಅಚ್ಚುಕಟ್ಟು ಪ್ರದೇಶದಲ್ಲಿ ರೈತರ ಅನಧಿಕೃತ ನೀರು ಬಳಕೆಯಿಂದಾಗಿ ಕಾಲುವೆಯಲ್ಲಿ 28ಕಿ.ಮೀ. ಇಂದ ಮುಂದಕ್ಕೆ ಸಾಕಷ್ಟು ನೀರು ಲಭ್ಯವಾಗದಿರುವುದರಿಂದ ಪಾರ್ಶ್ವ ಕಾಲುವೆ ಸಂಖ್ಯೆ: 16 ರಿಂದ 32ರಡಿ ಸುಮಾರು 5380ಹೆಕ್ಟೇರ್ ಅಚ್ಚುಕಟ್ಟು ಪ್ರದೇಶವು ನೀರಾವರಿಯಿಂದ ವಂಚಿತವಾಗಿದೆ. ಆದ್ದರಿಂದ ಬೋನಾಳ ಕೆರೆಯಿಂದ ನೀರನ್ನು ಎತ್ತಿ ವಿತರಣಾ ಕಾಲುವೆ ಸಂಖ್ಯೆ:6ರ ಕಿ.ಮೀ. 17ರಲ್ಲಿ ಸೇರಿಸುವ ಪ್ರಸ್ತಾವನೆ ಪರಿಶೀಲನೆಯ ಹಂತದಲ್ಲಿ ಇದೆ. ಇದರಿಂದಾಗಿ ಮೇಲೆ ತಿಳಿಸಲಾದ ನೀರಾವರಿ ವಂಚಿತ ಪ್ರದೇಶದ ರೈತರ ಸಮಸ್ಯೆ ಶಾಶ್ವತವಾಗಿ ಪರಿಹರಿಸಲು ಯೋಜಿಸಲಾಗಿದೆ.

ವಿಜಯನಗರ ಕಾಲದ ಅಣೆಕಟ್ಟುಗಳ ದುರಸ್ಥಿ

629 (5416) : ಶ್ರೀ ಶಂಕರ್ ರೆಡ್ಡಿ ಎಂ.(ಸಿರಗುಪ್ಪ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಂಗಭದ್ರ ಅಣೆಕಟ್ಟು ನಿರ್ಮಾಣ ಮಾಡುವ ಸಮಯದಲ್ಲಿ (ವಿಜಯನಗರದ ಕಾಲದಲ್ಲಿ) ನಿರ್ಮಾಣವಾದ ಅಣೆಕಟ್ಟುಗಳಿಗೆ ನೀರೊದಗಿಸುವ ಭರವಸೆಯನ್ನು ಅಂದಿನ ಸರ್ಕಾರ ಒಪ್ಪಂದ ಮಾಡಿಕೊಂಡಿದೆಯೇ:

ಆ) ಹಾಗಿದ್ದಲ್ಲಿ ಆ ಒಪ್ಪಂದ ಕಾರ್ಯಗತವಾಗುತ್ತಿದೆಯೇ:

ಇ) ವಿಜಯನಗರ ಕಾಲದಲ್ಲಿ ನಿರ್ಮಾಣವಾದ ಅಣೆಕಟ್ಟುಗಳ ಶಿಥಿಲಾವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿಯೇ: ಹಾಗಿದ್ದಲ್ಲಿ, ಅವುಗಳನ್ನು ದುರಸ್ಥಿಗೊಳಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ?

ಶ್ರೀ ಎಚ್.ಕೆ.ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ಆದರೆ ವಿಜಯನಗರ ಕಾಲುವೆಗಳಿಗೆ ವಾರ್ಷಿಕವಾಗಿ ಕೆ.ಡಬ್ಲ್ಯೂ.ಡಿ.ಟಿ. ಅವಾರ್ಡ್ ಪ್ರಕಾರ 12.06 ಟಿ.ಎಂ.ಸಿ. ನೀರನ್ನು ನಿಗದಿಪಡಿಸಿದ್ದು ಆ ಪ್ರಕಾರ ವಾರ್ಷಿಕವಾಗಿ ಲಭ್ಯವಾಗುವ ನೀರಿನ ಪ್ರಮಾಣಕ್ಕನುಗುಣವಾಗಿ ನೀರನ್ನು ಪೂರೈಸಲಾಗುತ್ತಿದೆ.

ಆ) ಕೆ.ಡಬ್ಲ್ಯೂ.ಡಿ.ಟಿ.ಅವಾರ್ಡ್ ಪ್ರಕಾರ ನೀರಾವರಿ ವರ್ಷದಲ್ಲಿ ಲಭ್ಯವಾಗುವ ನೀರಿನ ಪ್ರಮಾಣಕ್ಕನುಗುಣವಾಗಿ ನೀರನ್ನು ವಿಜಯನಗರ ಕಾಲುವೆಗಳಿಗೆ ಒದಗಿಸಲಾಗುತ್ತಿದೆ.

ಇ) ಗಮನಕ್ಕೆ ಬಂದಿದೆ ವಿಜಯನಗರ ಕಾಲದಲ್ಲಿ ನಿರ್ಮಾಣವಾದ ಅಣೆಕಟ್ಟುಗಳು, ಸೋರುವಿಕೆಯನ್ನು ಹೊರತುಪಡಿಸಿ, ಸುಸ್ಥಿತಿಯಲ್ಲಿದ್ದು ವಿಜಯನಗರ ಕಾಲುವೆಗಳಲ್ಲಿ ನಿಗದಿತ ಪ್ರಮಾಣದಲ್ಲಿ ನೀರನ್ನು ಸಮರ್ಪಕವಾಗಿ ಪೂರೈಸಲಾಗುತ್ತಿದೆ. ಇವುಗಳನ್ನು ವಾರ್ಷಿಕ ನಿರ್ವಹಣೆ ಅನುದಾನದಡಿಯಲ್ಲಿ ನಿರ್ವಹಣೆ ಮಾಡಲಾಗುತ್ತಿದೆ.

ಪುತ್ತೂರು ಎ.ಪಿ.ಎಂ.ಸಿಯಲ್ಲಿ ವ್ಯಾಪಾರಿಗಳಿಗೆ ಪರವಾನಿಗೆ ನೀಡುವಲ್ಲಿ ತಾರತಮ್ಯ

630 (4868) : ಶ್ರೀ ಸದಾನಂದ ಗೌಡ ಡಿ.ವಿ. (ಪುತ್ತೂರು) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪುತ್ತೂರು ಎಪಿಎಂಸಿ ವ್ಯಾಪ್ತಿಯಲ್ಲಿ ವರ್ತಕರು ತಾವು ಖರೀದಿಸಿದ ಕೃಷಿ ಹುಟ್ಟುವಳಿಗಳಿಗೆ ಶುಲ್ಕ ಪಾವತಿಸುತ್ತಿದ್ದರೂ, ಅವುಗಳನ್ನು ಎಪಿಎಂಸಿ ವ್ಯಾಪ್ತಿಯಿಂದ ಹೊರಗೆ ಮಾರಾಟಕ್ಕೆ ಕಳುಹಿಸುವ ಸಂದರ್ಭದಲ್ಲಿ ಇಲಾಖೆಯಿಂದ ನೀಡುವ ಸಾಗಾಟ ಪರ್ಮಿಟು ನೀಡದೇ ಇರಲು ಕಾರಣವೇನು;

ಆ) ಪುತ್ತೂರು ನಗರದಲ್ಲಿ ಕೃಷಿ ಹುಟ್ಟುವಳಿ ಖರೀದಿಸುತ್ತಿರುವ ವರ್ತಕರಿಗೆ ಮಾತ್ರ ಸಾಗಾಟ ಪರ್ಮಿಟು ನೀಡದೇ ಕಾರ್ಯದರ್ಶಿಯವರಿಗೆ ಎಪಿಎಂಸಿ ಅಧ್ಯಕ್ಷರು ಸೂಚಿಸಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಹೀಗೆ ವರ್ತಕರಿಗೆ ಕಿರುಕುಳ ಕೊಡುವ ಬಗ್ಗೆ ಎಪಿಎಂಸಿ ಅಧಿಕಾರಿಗಳ ಬಗ್ಗೆ ಏನು ಕ್ರಮ ಕೈಗೊಳ್ಳಲಾಗುವುದು;

ಈ) ಹೀಗೆ ಕೆಲವು ವರ್ತಕರಿಗೆ ಸಾಗಾಟ ಪರ್ಮಿಟು ನೀಡಿ, ಕೆಲವು ವರ್ತರಿಗೆ ಸಾಗಾಟ ಪರ್ಮಿಟು ನೀಡದೇ ಇರಲು ಕಾರಣವೇನು; ಈ ತಾರತಮ್ಯ ಮಾಡುವ ಎಪಿಎಂಸಿ ಕಾರ್ಯದರ್ಶಿ ವಿರುದ್ಧ ಏನು ಕ್ರಮ ಕೈಗೊಳ್ಳಲಾಗುವುದು?

ಶ್ರೀ ಬಿ.ಎಸ್.ಪಾಟೀಲ್ (ಸಾಸನೂರು) (ಕೃಷಿ ಮಾರುಕಟ್ಟೆ ಸಚಿವರು)

ಅ) ಮಾರುಕಟ್ಟೆ ಕಾಯ್ದೆಯಲ್ಲಿ ಅಧಿಸೂಚಿತ ಹುಟ್ಟುವಳಿಗಳ ಖರೀದಿ ಹಾಗೂ ಮಾರಾಟವನ್ನು ಮಾರುಕಟ್ಟೆ ಪ್ರಾಂಗಣದಲ್ಲಿ ನಡೆಯುವಂತೆ ಕಡ್ಡಾಯಗೊಳಿಸಲಾಗಿದೆ. ಪುತ್ತೂರು ಸಮಿತಿಯು ಮಾರುಕಟ್ಟೆ ಪ್ರಾಂಗಣವನ್ನು ಅಭಿವೃದ್ಧಿಪಡಿಸಿದ್ದು, ವ್ಯಾಪಾರ ವಹಿವಾಟನ್ನು ಪ್ರಾಂಗಣಕ್ಕೆ ಸ್ಥಳಾಂತರಿಸುವ ಸಂಬಂಧ ಕ್ರಮ ಕೈಗೊಂಡಿದ್ದು, ಇದರ ವಿರುದ್ಧ ವರ್ತಕರು ಸಲ್ಲಿಸಿದ್ದ ಮನವಿಯನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಜಾಗೊಳಿಸಿ, ಪ್ರಾಂಗಣಕ್ಕೆ ವ್ಯಾಪಾರ ವಹಿವಾಟನ್ನು ಸ್ಥಳಾಂತರಿಸಬೇಕೆಂದು ತೀರ್ಪು ನೀಡಿರುತ್ತದೆ.

ಪ್ರಾಂಗಣದ ಹೊರಗೆ ವ್ಯಾಪಾರ ಚಟುವಟಿಕೆಗಳನ್ನು ನಿರ್ಬಂದಿಸಿ ಪ್ರಾಂಗಣದಲ್ಲಿಯೇ ವಹಿವಾಟು ನಡೆಸಲು ವರ್ತಕರಿಗೆ ತಿಳುವಳಿಕೆ ನೀಡಲಾಗಿದೆ. ಇದನ್ನು ಉಲ್ಲಂಘಿಸಿ, ವಹಿವಾಟು ನಡೆಸುವ ವರ್ತಕರಿಗೆ ಸಾಗಾಣಿಕೆ ಪರ್ಮಿಟ್ ನೀಡದಿರಲು ತೀರ್ಮಾನ ಕೈಗೊಂಡಿದ್ದು ಈ ತೀರ್ಮಾನವು ಕಾನೂನಿನ್ವಯ ಕೈಗೊಂಡ ಕ್ರಮವಾಗಿರುತ್ತದೆ.-

ಆ) ಬಂದಿದೆ

ಇ) ಪುತ್ತೂರು ನಗರದಲ್ಲಿನ ಅಭಿವೃದ್ಧಿಪಡಿಸಿದ ಮಾರುಕಟ್ಟೆ ಪ್ರಾಂಗಣಕ್ಕೆ ವ್ಯಾಪಾರ ವಹಿವಾಟು ಸ್ಥಳಾಂತರದ ಹಿನ್ನೆಲೆಯಲ್ಲಿ ಪ್ರಾಂಗಣದ ಹೊರಗೆ ವ್ಯವಹರಿಸುವ ವರ್ತಕರಿಗೆ ಸಾಗಾಣಿಕೆ ಪರ್ಮಿಟ್ ನೀಡದೆ ಇರಲು ಸಮಿತಿಯು ಕೈಗೊಂಡ ತೀರ್ಮಾನವು ಕಾನೂನಿನ್ವಯ ಕೈಗೊಂಡ ಕ್ರಮವಾಗಿದ್ದು, ಇದರಲ್ಲಿ ಕಿರುಕುಳದ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಮೇಲಿನಂತೆ ಪ್ರಶ್ನೆ ಉದ್ಭವಿಸುವುದಿಲ್ಲ

ರಾಜ್ಯದಲ್ಲಿ ಪಡಿತರ ಚೀಟಿಗಳು

631 (5431) : ಶ್ರೀ ಗೋಪಾಲ ಭಂಡಾರಿ ಹೆಚ್ (ಕಾರ್ಕಳ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ವಿತರಿಸಲಾಗುವ ಪಡಿತರ ಚೀಟಿಯಲ್ಲಿ ಎಷ್ಟು ವಿದಗಳಿವೆ ಮತ್ತು ಅವುಗಳಲ್ಲಿರುವ ಸವಲತ್ತುಗಳು ಮತ್ತು ಪಡಿತರ ಬೆಲೆ ಎಷ್ಟು